ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 07–09–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಶಿಕ್ಷಕರ ದಿನಾಚರಣೆ 2015:<br><br>ಮುಖ್ಯ ಅತಿಥಿಗಳು:<br><br>ಡಾ: ಚಂದ್ರಶೇಖರ ಬಿ. ಕಂಬಾರ<br>ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತರು,<br>ಸ್ಥಾಪನಾ ಕುಲಪತಿಗಳು,<br>ಕನ್ನಡ ವಿಶ್ವವಿದ್ಯಾಲಯ, ಹಂಪಿ<br><br>ಅಧ್ಯಕ್ಷತೆ:<br><br>ಡಾ: ಕೆ.ಎ. ರವೀಂದ್ರನಾಥ್,<br>ಗೌರವಾನ್ವಿತ ಕುಲಪತಿಗಳು,<br>ರಾಜೀವ್ ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, ಬೆಂಗಳೂರು | 08–09–2015<br>ಮಂಗಳವಾರ<br>ಮಧ್ಯಾಹ್ನ<br>3–00 ಘಂಟೆಗೆ | ಧನ್ವಂತರಿ ಸಭಾಂಗಣ,<br>ರಾಜೀವ್‌ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ,<br>4ನೇ ಟಿ ಬ್ಲಾಕ್,<br>ಜಯನಗರ,<br>ಬೆಂಗಳೂರು |
| 2 | **"Save the Farmer" Interactive Meet**<br><br>**Presided by:**<br><br>**Sri. T. B. Jayachandra**<br>**Minister for Law and Parliamentary Affairs, GOK** | **8-9-2015**<br>**Tuesday**<br>**4.00 P.M.** | **Room No. 334,**<br>**Conference Hall,**<br>**Third Floor,**<br>**Vidhana Soudha,**<br>**Bangalore** |

## SPECIAL PRESS INVITATION

| SL No | DETAILS OF THE PROGRAMME | DATE AND | VENUE OF THE PROGRAMME |
|---|---|---|---|

| | | TIME | |
|---|---|---|---|
| 1. | **PRESS BRIEFING BY MINISTRY OF TOURISM, REPUBLIC OF INDONASIA AT 38th PACIFIC ASIA TRAVEL ASSOCIATION TRAVEL MART**<br>**:**<br>**PROF. I.GOEPILANA, DEPUTY MINISTER FOR INTERNATIONAL TOURISM MARKETING, MINISTRY OF TOURISM**<br>**Mr. KEVIN B.MURPHY, CHAIRMAN, PATA** | **08-09-2015**<br>**9-30 A M** | **PARIJATHA, BENGALURU INTERNATIONAL EXHIBITION CENTRE, MADANAYAKANA HALLI, TUMAKURU ROAD, BENGALURU.** |
| 2. | **2015 PATA GOLD AWARDS PRESENTATION :**<br>**Mr. R.V. DESHPANDE,**<br>**MINISTER FOR TOURISM AND INDUSTRIES, GOVT. OF KARNATAKA**<br>**Mr. KEVIN B.MURPHY, CHAIRMAN, PATA** | **08-09-2015**<br>**12-45 PM** | **JACARANDA AND GULMOHAR,**<br>**CONFERENCE CENTER**<br>**BENGALURU INTERNATIONAL EXHIBITION CENTRE, MADANAYAKANA HALLI, TUMAKURU ROAD, BENGALURU.** |

**P. S. :**

**DEPARTMENT OF TOURISM HAS MADE VEHICLE ARRANGEMENT TO FACILITATE MEDIA PERSONS TO COVER THE EVENT. THE VEHICLE WILL LEAVE AT 8-00 A M FROM KHANIJA BHAVAN PREMISES ON RACE COURSE ROAD.**

**CONTACT : MR ASHWIN SHETTY ON HIS MOBILE No. 99868 88887, MR CHETHAN ON HIS MOBILE No. 98445 35509 OR MR SHIVARAJ ON HIS MOBILE No. 87222 77132 FOR TRANSPORT FACILITY.**

**CONTACT MR DEV ON HIS MOBILE No. 98456 89954 FOR PARKING FACILITY FOR THE OUTSIDE BROADCASTING VANS OR SPOT NEWS GATHERING VEHICLES AT THE VENUE OF THE EVENT.**

**D. P. MURALIDHAR**
**DEPUTY DIRECTOR (NEWS)**

# ಪತ್ರಿಕಾ ಪ್ರಕಟಣೆ

## ಪ್ರಸನ್ನ ವೀರಾಂಜನೇಯಸ್ವಾಮಿಗೆ ನವನೀತ ಅಲಂಕಾರ ಮಹೋತ್ಸವ

ಬೆಂಗಳೂರು, ಸೆಪ್ಟೆಂಬರ್ 7 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆಗೆ ಸೇರಿದ ಮಹಾಲಕ್ಷ್ಮೀಪುರಂನ ಶ್ರೀ ಪ್ರಸನ್ನ ವೀರಾಂಜನೇಯಸ್ವಾಮಿ ದೇವಾಲಯದಲ್ಲಿ ಕೊನೆಯ ಶ್ರಾವಣ ಶನಿವಾರ ಸೆಪ್ಟೆಂಬರ್ 12 ರಂದು ದೇವರಿಗೆ 40 ನೇ ವರ್ಷದ ನವನೀತ ಅಲಂಕಾರ ಮಹೋತ್ಸವವನ್ನು ಏರ್ಪಡಿಸಲಾಗಿದೆ ಎಂದು ಇಲಾಖೆ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

/ಬಾಬು/ಕೆಎಂ

## ಪಠ್ಯ ಪುಸ್ತಕ ವೆಬ್‌ಸೈಟ್‌ನಲ್ಲಿ ಅಳವಡಿಕೆ

ಬೆಂಗಳೂರು, ಸೆಪ್ಟೆಂಬರ್ 7 (ಕರ್ನಾಟಕ ವಾರ್ತೆ)

ಕರ್ನಾಟಕ ಪಠ್ಯ ಪುಸ್ತಕ ಸಂಘದ ನಿರ್ದೇಶನದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪಠ ಪುಸ್ತಕವನ್ನು ಹಾಗೂ ಸಂಗೀತ ಮತ್ತು ನೃತ್ಯದ ಪಠ್ಯ ಪುಸ್ತಕಗಳನ್ನು ಅಂತರ್ಜಾಲ **www/ktbs.kar.nic.in** ನಲ್ಲಿ ಅಳವಡಿಸಲಾಗಿದೆ ಹಾಗೂ ಇತರೆ ಪಠ್ಯ ಪುಸ್ತಕಗಳು ಬೆಂಗಳೂರಿನ ಬೊಮ್ಮನಹಳ್ಳಿಯ ಹೊಸೂರು ರಸ್ತೆಯಲ್ಲಿರುವ ಸರ್ಕಾರಿ ವಿಭಾಗೀಯ ಪಠ್ಯ ಪುಸ್ತಕಗಳ ಮಳಿಗೆಗಳಲ್ಲಿ ದೊರೆಯುತ್ತದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಪಲ್ಲವಿ/ಬಾಬು/ಕೆಎಂ

## ವಾರ್ಷಿಕ ಸಾಮಾನ್ಯ ಸಭೆ

ಬೆಂಗಳೂರು, ಸೆಪ್ಟೆಂಬರ್ 7 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಸಕ್ಕರೆ ಕಾರ್ಖಾನೆಗಳ ಮಹಾಮಂಡಳಿಯ 47ನೇ ವಾರ್ಷಿಕ ಸಾಮಾನ್ಯ ಸಭೆಯು ಸೆಪ್ಟೆಂಬರ್ 11 ರ ಶುಕ್ರವಾರ ಬೆಳಿಗ್ಗೆ 11–30 ಗಂಟೆಗೆ ಮಲ್ಲೇಶ್ವರಂ ದೇವಸ್ಥಾನ ಬೀದಿಯ 1ನೇ ಮುಖ್ಯರಸ್ತೆಯಲ್ಲಿರುವ ಮಹಾಮಂಡಳಿಯ ಆಡಳಿತ ಮಂಡಳಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ಪಲ್ಲವಿ/ಬಾಬು/ಕೆಎಂ

# ಗ್ರಾಮಪಂಚಾಯತಿ ಚುನಾವಣೆ: ಶೇ. 85.52 ಮತದಾನ

**ಬೆಂಗಳೂರು, ಸೆಪ್ಟೆಂಬರ್ 7 (ಕರ್ನಾಟಕ ವಾರ್ತೆ)**

ರಾಜ್ಯದಲ್ಲಿ ಸೆಪ್ಟೆಂಬರ್ 6 ರಂದು ನಡೆದ 8 ಗ್ರಾಮ ಪಂಚಾಯತಿಗಳ 93 ಸ್ಥಾನಗಳಿಗೆ ಚುನಾವಣೆಯಲ್ಲಿ ಶೇ. 85.52 ಮತದಾನ ನಡೆದಿದೆ ಎಂದು ರಾಜ್ಯ ಚುನಾವಣಾ ಆಯೋಗದ ಪ್ರಕಟಣೆ ತಿಳಿಸಿದೆ.

ಪಲ್ಲವಿ/ಬಾಬು/ಕೆಎಂ

# ಕನ್ನಡ ಚಿತ್ರಗಳಿಗೆ ಮಾರುಕಟ್ಟೆ ಒದಗಿಸಲು ಎನ್‌ಎಫ್‌ಡಿಸಿ ಆಸಕ್ತಿ

ಬೆಂಗಳೂರು, ಸೆಪ್ಟೆಂಬರ್ 7 (ಕರ್ನಾಟಕ ವಾರ್ತೆ)

ರಾಷ್ಟ್ರೀಯ ಚಲನಚಿತ್ರ ಅಭಿವೃದ್ಧಿ ಮಂಡಳ (ಎನ್‌ಎಫ್‌ಡಿಸಿ)ಯ ಫಿಲ್ಮ ಬಜಾರ್‌ನ ಸಹ ನಿರ್ದೇಶಕರಾದ ಮಾನಸ ಮಲ್ಹೋತ್ರ ಅವರು ಕನ್ನಡ ಚಿತ್ರಗಳಿಗೆ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಹಾಗೂ ವಿದೇಶಿ ಮಾರುಕಟ್ಟೆಯಲ್ಲಿ ಸುಸಜ್ಜಿತವಾದ ಮಾರುಕಟ್ಟೆಯನ್ನು ಒದಗಿಸುವ ಸಾಧ್ಯತೆಯ ಕುರಿತು ಇಂದು ಕನ್ನಡ ಚಲನಚಿತ್ರ ನಿರ್ದೇಶಕರುಗಳೊಂದಿಗೆ ಚರ್ಚಿಸಿದರು.

ಕರ್ನಾಟಕ ಚಲನಚಿತ್ರ ಅಕಾಡೆಮಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿ ಮಾತನಾಡಿ ಮುಂಬರುವ ಗೋವಾ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ತೆರೆಯಲ್ಪಡುವ ಫಿಲ್ಮ್ ಬಜಾರ್‌ನಲ್ಲಿ ಕನ್ನಡ ಚಿತ್ರಗಳಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆ ಒದಗಿಸುವ ದೃಷ್ಠಿಯಿಂದ ಅಕಾಡೆಮಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಮಳಿಗೆ ಪ್ರಾರಂಭಿಸುವ ಸಲುವಾಗಿ ಕನ್ನಡ ಚಿತ್ರರಂಗದ ನಿರ್ದೇಶಕರು ಹಾಗೂ ನಿರ್ಮಾಪಕರಿಗೆ ಹೆಚ್ಚಿನ ತಿಳುವಳಿಕೆ ನೀಡುವ ಕುರಿತು ಅವರು ಸಂವಾದ ನಡೆಸಿದಿರು.

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರಾದ ರಾಜೇಂದ್ರ ಸಿಂಗ್ ಬಾಬು ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಕನ್ನಡದಲ್ಲಿ ಉತ್ತಮ ಚಿತ್ರಗಳು ಮೂಡಿಬರುತ್ತಿದ್ದು, ಅವುಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಸೂಕ್ತ ಮಾರುಕಟ್ಟೆ ಒದಗಿಸುವ ಕುರಿತು ಪ್ರತಿಪಾದಿಸಿದರು.

ಖ್ಯಾತ ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ, ಗಿರಿರಾಜ್ ಹಾಗೂ ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ತಾರಾ ಅನುರಾಧಾ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕರಾದ ಎನ್.ಆರ್.ವಿಶುಕುಮಾರ್ ಅವರು ಕನ್ನಡ ಚಿತ್ರಗಳಿಗೆ ಮಾರುಕಟ್ಟೆ ಒದಗಿಸುವ ಕುರಿತು ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟರು.

ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್.ಬಿ.ದಿನೇಶ್ ಹಾಜರಿದ್ದರು.

## ONE DAY WORKSHOP ON ROOF TOP SOLAR PHOTOVOLTAIC POWER SYSTEMS (RTPVS) AND NET ENERGY METERING on 12TH SEPTEMBER, 2015

**Bangalore, September 7, (Karnataka Information)**

The Indian power sector is facing multiple crises, ranging from financial viability of distribution utilities to the challenges in ensuring quality power supply for all while trying to reduce adverse local socio-environmental impacts. It is well accepted that current fossil fuel based power is unsustainable and in the long term, a shift to renewable sources is inevitable. Such a scenario requires innovative policies which can help address more than one crisis. Promoting Roof Top Photo Voltaics for self consumption and with net metering is one such policy approach.

In this decade advancement in solar technologies has brought down the cost of solar PV modules drastically making solar power projects economically viable. Added to this the State Government has in its policy provided for net metering arrangement and has provided relatively high rates for buy back for power @ Rs. 9.56 (without subsidy) and Rs 7.20 (with subsidy), whereas the energy charges in Bengaluru from Domestic customers (high end consumption) @ Rs 5.60 (> 200 kWh) and from commercial customers @ Rs 7.20 (>50 kWh). Thus the Govt. has made the roof top solar scheme very attractive and lucrative so that more and more house owners come forward to install it.

Since RTPVS is a renewable source of energy, it is green power, does not require dedicated land and saves on precious water use; or use of natural resources such as coal for power generation it is an environmentally benign option. Further, with grid interconnection the need for use of batteries, which have significant environmental implications, is also avoided.

Hon'ble Energy Minister Shri D.K. Shivakumar, Govt. of Karnataka has launched the grid-connected Rooftop SPV for self-consumption with net-metering that seeks to tap solar power generated by individual consumers. Under Solar Karnataka Programme it is targeted to achieve minimum of 400 MW of grid connected solar rooftop power generation projects in the state by 2018. If the potential is fully exploited, it will pave way for considerable reduction in the demand-supply gap in the energy sector.

In this backdrop Mahatma Gandhi Institute of Rural energy and Development, Bengaluru-560064 is organizing a one day workshop on RTPVS and Net Energy Metering at its campus at Srirampura Cross, Jakkur on September 12$^{th}$ 2015 between 10.00 AM and 5.30 P.M to create awareness and educate the population who are desirous of installing roof top SPV's this workshop will provide all the required information right from procedures, technology, subsidies, types of equipment and materials available in the market, etc., with the sole objective of convincing the participants to go ahead and install the systems. Experts Speakers from BESCOM, KREDL, KERC will speak on applied technologies, Govt. Policies, Notifications, Subsidies and Procedure for getting connection and loan facility etc. Solar PV rooftop installers will display their products and customers can have direct interaction with them. This workshop will help the participants to identify right system suited to their use and all queries shall be answered by the experts concerned. All those who are interested in installing roof top SPV system and interested in participating in the workshop are welcome and are required to register with MGIRED. Since there is scope for limited participation, **only the first 50 will be registered and allowed to participate on first come first serve basis.** It is hoped that if a few who attend the workshop are motivated and will install RT SPV system, then their neighbors and friends will also be

influenced  by the success which will help in spread of the use of this technology in Bengaluru and elsewhere.

For more details about registration one can visit MGIRED website: www.mgired.kar.nic.in, or contact email: mgrired@gmail.com or Shri. Praveen Kumar, Senior Faculty telephone no: 080-23626493, 23626359; mob: 9986629039 email: mgrired@gmail.com. Registration fee is Rs 500/- per participant which includes lunch, Tea and hand-outs. A Demand Draft of Rs.500/-drawn in favour of Executive Director,MGIRED Bengaluru must be paid at the institute for registration along with the filled registration form.

| | |
|---|---|
| **Programme** | : 1 day training on Roof Top Solar PV System and Net Energy Metering |
| **Date** | : 12TH SEPTEMBER, 2015 |
| **Time** | : 10.00 AM to 5.30 P M |
| **Venue** | : Mahatma Gandhi Institute of Rural Energy & Development, Srirampura Cross, Jakkur, Bengaluru-560 064<br>Ph: 080-23626493, 23626359,<br>email: mgrired@gmail.com |

**Programme Objective:** Guide people interested in installing Roof Top Solar PV System for self use and for net metering.
**Who can attend:** Whoever is desirous of installing rooftop PV System.

## ಮೇಲ್ಛಾವಣಿ "ಸೌರಶಕ್ತಿ ಪಿ.ವಿ. ವಿದ್ಯುತ್ ಘಟಕಗಳು ಮತ್ತು ನೆಟ್ ಮೀಟರಿಂಗ್ ವ್ಯವಸ್ಥೆ" ಕುರಿತ ಒಂದು ದಿನದ ಕಾರ್ಯಾಗಾರ

ಬೆಂಗಳೂರು, ಸೆಪ್ಟೆಂಬರ್ 7, (ಕರ್ನಾಟಕ ವಾರ್ತೆ)

ನೆಟ್‌ಮೀಟರಿಂಗ್ ವ್ಯವಸ್ಥೆ ಹೊಂದಿದ ಮೇಲ್ಛಾವಣಿ ಪಿ.ವಿ. ಘಟಕಗಳು ಹಲವು ಸಮಸ್ಯೆಗಳಿಂದ ಸೊರಗುತ್ತಿರುವ ವಿದ್ಯುತ್ ಕಂಪನಿಗಳಿಗೆ ವರದಾನವಾಗಿದೆ. ಸೌರಶಕ್ತಿ ತಂತ್ರಜ್ಞಾನದ ವಿಕಸನದಿಂದ ಮೇಲ್ಛಾವಣಿ ಪಿ.ವಿ. ವ್ಯವಸ್ಥೆಯು ಆರ್ಥಿಕವಾಗಿ ಕಾರ್ಯಸಾಧ್ಯವಾಗಿದೆ, ಈ ಮೂಲಕ ಕಂಪನಿಗಳ ಮತ್ತು ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರವಾಗಿದೆ. ಇದಕ್ಕನುಗುಣವಾಗಿ ರಾಜ್ಯ ಸರ್ಕಾರವು ವಿದ್ಯುತ್ ದರ ನಿಗದಿಪಡಿಸಿದೆ. ಪ್ರತಿ ಯೂನಿಟ್‌ಗೆ ರೂ.9.56/– (ಸಹಾಯಧನದೊಂದಿಗೆ) ಮತ್ತು ರೂ.7.2/– (ಸಹಾಯಧನವಿಲ್ಲದೆ) ಖಾಲಿ ಮೇಲ್ಛಾವಣಿಯಲ್ಲಿ ಪಿ.ವಿ. ವಿದ್ಯುತ್ ಘಟಕಗಳನ್ನು ಅಳವಡಿಸುವ ಗ್ರಾಹಕರಿಗೆ ನೀಡುವುದರಿಂದ, ಇದು ಲಾಭದಾಯಕ ಬಂಡವಾಳವಾಗಿದೆ.

ಕರ್ನಾಟಕ ಸರ್ಕಾರದ ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಸ್ವಬಳಕೆಗೆ ಸೌರಶಕ್ತಿ ಬಳಸುವುದನ್ನು ಪ್ರೋತ್ಸಾಹಿಸಲು ಜಾಲಕ್ಕೆ ಸಂಪರ್ಕವನ್ನು ಮಾಡಬಹುದಾಗಿದ್ದು, ನೆಟ್‌ಮೀಟರಿಂಗ್ ವ್ಯವಸ್ಥೆವುಳ್ಳ

ಮೇಲ್ಛಾವಣಿ ಪಿ.ವಿ. ಘಟಕಗಳಿಗೆ ಯೋಜನೆಯನ್ನು ಘೋಷಿಸಿದ್ದಾರೆ. ಈ ಯೋಜನೆಯಿಂದ, 2018ರೊಳಗೆ ಕನಿಷ್ಟ 400 ಮೆ.ವ್ಯಾ ಸೌರಶಕ್ತಿ ಪಿ.ವಿ. ನೆಟ್ ಮೀಟರಿಂಗ್ ಮೇಲ್ಛಾವಣಿ ವ್ಯವಸ್ಥೆಯುಳ್ಳ ವಿದ್ಯುತ್ ಉತ್ಪಾದನೆಯ ಸಾಧನೆಯು ಗುರಿಯಾಗಿದೆ. ಈ ಸಾಮರ್ಥ್ಯದ ಪೂರ್ಣ ಬಳಕೆಯಾದಲ್ಲಿ, ಬೇಡಿಕೆ ಮತ್ತು ಉತ್ಪಾದನೆಯ ಮಧ್ಯೆ ಇರುವ ಕಂದಕವನ್ನು ಕಡಿಮೆ ಮಾಡಬಹುದಾಗಿದೆ.

ಈ ಹಿನ್ನಲೆಯಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ಒಂದು ದಿನದ **ಮೇಲ್ಛಾವಣಿ "ಸೌರಶಕ್ತಿ ಪಿ.ವಿ. ವಿದ್ಯುತ್ ಘಟಕಗಳು ಮತ್ತು ನೆಟ್ ಮೀಟರಿಂಗ್ ವ್ಯವಸ್ಥೆ"** ಕುರಿತ ಕಾರ್ಯಾಗಾರವನ್ನು ನಮ್ಮ ಸಂಸ್ಥೆಯ ಆವರಣ ಶ್ರೀರಾಮಪುರ ಕ್ರಾಸ್, ಜಕ್ಕೂರು ಇಲ್ಲಿ **ದಿನಾಂಕ 12 ಸೆಪ್ಟೆಂಬರ್, 2015** ರಂದು ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 05:30 ಗಂಟೆವರೆಗೆ ಆಯೋಜಿಸಲಾಗಿದೆ. ಈ ಮೂಲಕ ಜಾಗೃತಿ ಮೂಡಿಸಿ ಶಿಕ್ಷಣ ಕೊಡುವುದಾಗಿದೆ. ಮೇಲ್ಛಾವಣಿ ಪಿ.ವಿ. ವಿದ್ಯುತ್ ಘಟಕಗಳನ್ನು ಅಳವಡಿಸಲು ಬೇಕಾಗಿರುವ ವಿಧಾನಗಳು, ತಂತ್ರಜ್ಞಾನಗಳು, ಸಹಾಯಧನ, ಮಾರುಕಟ್ಟೆಯಲ್ಲಿ ಲಭ್ಯವಿರುವ ಸಲಕರಣೆಗಳು, ಸಾಲ ಯೋಜನೆಗಳ ಬಗ್ಗೆ ತಜ್ಞರು ಮಾಹಿತಿ ನೀಡುತ್ತಾರೆ. ಈ ಸಂದರ್ಭದಲ್ಲಿ ಘಟಕಗಳನ್ನು ಅಳವಡಿಸುವವರು ತಮ್ಮ ಉತ್ಪನ್ನಗಳೊಂದಿಗೆ ಲಭ್ಯರಿರುತ್ತಾರೆ. ಶಿಬಿರಾರ್ಥಿಗಳು ನೇರವಾಗಿ ಅವರಿಂದ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದಾಗಿದೆ. ಮೇಲ್ಛಾವಣಿ ಪಿ.ವಿ. ಘಟಕಗಳನ್ನು ಅಳವಡಿಸಲು ಉತ್ಸುಕರಾಗಿರುವವರು ಕಾರ್ಯಾಗಾರದಲ್ಲಿ ಭಾಗವಹಿಸಲು ನೋಂದಾಯಿಸಬೇಕು. ಸೀಮಿತ ನೋಂದಣಿಗೆ ಅವಕಾಶವಿರುವುದರಿಂದ, ಮೊದಲು ಬಂದವರಿಗೆ ಆದ್ಯತೆ. ಕೇವಲ 50 ಜನರಿಗೆ ಅವಕಾಶವಿರುತ್ತದೆ.

ಹೆಚ್ಚಿನ ಮಾಹಿತಿಗೆ, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯ ವೆಬ್‌ಸೈಟ್‌ನಿಂದ ಪಡೆಯಬಹುದು. ವೆಬ್‌ಸೈಟ್ : www.mgired.kar.nic.in ಅಥವಾ ಇ-ಮೇಲ್ :mgrired@gmail.com ಮಾಡಬಹುದು. ಇಲ್ಲವಾದಲ್ಲಿ ಶ್ರೀ ಪ್ರವೀಣ್ ಕುಮಾರ್.ಎಸ್.ಪಿ, ಹಿರಿಯ ಪ್ರಬಂಧಕರು, ಫೋನ್ ಸಂಖ್ಯೆ.080–23626359/23626493 ಹಾಗು ಮೊಬೈಲ್ ಸಂಖ್ಯೆ.9986629039 ಇವರನ್ನು ಸಂಪರ್ಕಿಸಬಹುದು. ನೋಂದಣಿ ಶುಲ್ಕ ರೂ.500/– ರ ಡಿ.ಡಿ.ಯನ್ನು "Executive Director, MGIRED" ಇವರ ಹೆಸರಿಗೆ ಪಡೆದು ರವಾನಿಸಬೇಕು. ಊಟ, ಟೀ ಮತ್ತು ಶಿಬಿರ ಸಾಮಗ್ರಿಗಳನ್ನು ನೀಡಲಾಗುವುದು. ಭಾಗವಹಿಸಲು ಇಚ್ಛೆ ಉಳ್ಳವರು ನೊಂದಣಿಯ ಅರ್ಜಿಯನ್ನು ಭರ್ತಿ ಮಾಡಿ ಸಂಸ್ಥೆಗೆ ತಲುಪಿಸುವುದು.

| | | |
|---|---|---|
| ಕಾರ್ಯಕ್ರಮ | : | ಒಂದು ದಿನದ ಕಾರ್ಯಾಗಾರ **ಮೇಲ್ಛಾವಣಿ "ಸೌರಶಕ್ತಿ ಪಿ.ವಿ. ವಿದ್ಯುತ್ ಘಟಕಗಳು ಮತ್ತು ನೆಟ್ ಮೀಟರಿಂಗ್ ವ್ಯವಸ್ಥೆ"** |
| ದಿನಾಂಕ | : | **12 ಸೆಪ್ಟೆಂಬರ್, 2015** |
| ಸಮಯ | : | ಬೆಳಿಗ್ಗೆ 10:00 ರಿಂದ ಸಂಜೆ 05:30 ಗಂಟೆವರೆಗೆ |
| ಸ್ಥಳ | : | ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಶ್ರೀರಾಮಪುರ ಕ್ರಾಸ್, ಜಕ್ಕೂರು, ಬೆಂಗಳೂರು–560064<br>ದೂರವಾಣಿ : 080–23626493, 23626359<br>ಇ–ಮೇಲ್ : mgrired@hotmail.com / mgrired@gmail.com |
| ಕಾರ್ಯಕ್ರಮದ ಉದ್ದೇಶ | : | ನೆಟ್ ಮೀಟರಿಂಗ್ ವ್ಯವಸ್ಥೆಯೊಂದಿಗೆ ಮೇಲ್ಛಾವಣಿ ಪಿ.ವಿ. ಘಟಕವನ್ನು ಸ್ವಬಳಕೆಗೆ |

| | | |
|---|---|---|
| | | ಅಳವಡಿಸಲು ಇಚ್ಛಿಸುವವರಿಗೆ ಮಾರ್ಗದರ್ಶನ ನೀಡುವುದು. |
| ಯಾರು ಭಾಗವಹಿಸಬಹುದು | : | ಮೇಲ್ಛಾವಣಿ ಪಿ.ವಿ. ಘಟಕಗಳನ್ನು ಅಳವಡಿಸಲು ಇಚ್ಛಿಸುವವರು |